ಡ್ವೆರಿ ವಿಶ್ವನಾಥ್, ಬೆಂಗಳೂರು
◆ ರಾಜಮಾರ್ಗ ಯಾವುದು? ಎಲ್ಲಿದೆ?



ರಾಜಕಾಲುವೆಯ ಮಾರ್ಗವೇ ರಾಜಮಾರ್ಗ. ಸದ್ಯಕ್ಕೆ ಅದು ಕೆಲವು ಅಪಾರ್ಟ್‌ಮೆಂಟ್‌ಗಳ ಕೆಳಗೆ ಇದೆ.

ಹೆಚ್.ಎನ್. ಸೂರ್ಯನಾರಾಯಣರಾವ್, ಅರಕಲವಾಡಿ
◆ ಸ್ಟುಡಿಯೋದಲ್ಲಿ ಸುಂದರವಾಗಿ ಮೂಡಿಬರುವ ಭಾವಚಿತ್ರ ಆಧಾರ್ ಕಾರ್ಡ್‌ನಲ್ಲಿ ಕೆಟ್ಟದಾಗಿ ಬರಲು ಕಾರಣವೇನು?
ಸರ್ಕಾರಕ್ಕೆ ಎಷ್ಟೇ ಸುಂದರವಾದುದನ್ನು ಕೊಟ್ಟರೂ ಅದನ್ನು ಅಂದಗೆಡಿಸುತ್ತದೆ ಎಂಬುದನ್ನು ತೋರಿಸಲು.

ಎಚ್. ಆನಂದಕುಮಾರ್, ಚಿತ್ರದುರ್ಗ
◆ ಚುನಾವಣಾ ಸಮಯದಲ್ಲೇ ಹೆಚ್ಚು ಐಟಿ ರೈಡ್‌ಗಳು ಆಗುವುದೇಕೆ?




ಇದು 'ಬಲರಾಮ'ರನ್ನು ಏನಾದರೂ ಉಪಾಯ ಮಾಡಿ ಯುದ್ಧಕಣದಿಂದ ಹೊರಗಟ್ಟುವ 'ಭಾರತ'ದ ತಂತ್ರ.

ಮುರಲೀಧರ ಕುಲಕರ್ಣಿ, ಬೀದರ್
◆ ಈಗ ಬರಹದಲ್ಲೂ 'ಅರಿಶಿಣ'ವು ಹರಿಶಿಣ ಆಗುತ್ತಿದೆಯಲ್ಲಾ....?
'ಸಿಕ್ಷನ ಕೊಡುವ ಮೇಸ್ತ್ರುಗಳ ಪೈಕಿ ಹಯೋಗ್ಯರೇ ಎಚ್ಚಾದರೆ ಈಕಾಕುತ್ತತಂತೆ.'

ಪೇಂಟರ್ ಪಾಪು, ಸಂತೇಮರಹಳ್ಳಿ
◆ ಹುಡುಗರ ಲೈಫ್‌ನಲ್ಲಿ ಬಯಸದೇ ಬಂದ ಭಾಗ್ಯ ಯಾವುದು?
ಕೇವಲ ಕ್ರಿಕೆಟ್ ನೋಡಿ ಸಂತೋಷ ಪಡುತ್ತಿದ್ದವರಿಗೆ ದೊರೆಯುತ್ತಿರುವ ಚಿಯರ್ ಗರ್ಲ್ಸ್ ಡ್ಯಾನ್ಸ್ ವೀಕ್ಷಣಾ ಭಾಗ್ಯ.

ನರಸಿಂಹ ಪೈ, ಹೊನ್ನಾವರ
◆ ಆರಾಧನೆಗೂ, ಸಮಾರಾಧನೆಗೂ ಏನು ವ್ಯತ್ಯಾಸ?
ಆರಾಧನೆಗೆ ಲಕ್ಷ್ಯ ಮುಖ್ಯ. ಸಮಾರಾಧನೆಗೆ ಭಕ್ಷ್ಯ ಮುಖ್ಯ.

ಕೆ.ಎಂ. ವಿಭೂತಿ, ಹರಿಹರ
◆ ಸಂಸಾರ ನಿಯಮಕ್ಕೂ, ಸಂಚಾರಿ ನಿಯಮಕ್ಕೂ ಅಂತರವೇನು ಗುರುವೆ?
ಅಲ್ಲಿ ವೇಗಕ್ಕೆ ವಶವಾಗಬಾರದು, ಇಲ್ಲಿ ಉದ್ವೇಗಕ್ಕೆ ವಶವಾಗಬಾರದು.

ಹಾಡ್ಯ ಬ. ಜಯಾನಂದ, ಮೈಸೂರು
◆ ಈಗಿನ ಚುನಾವಣಾ ತಂತ್ರಗಳನ್ನು ನೋಡಿದಾಗ ಮಹಾಭಾರತದ ಕೃಷ್ಣ ಬಿಗ್ ಝೀರೋ... ಏನಂತೀರಾ?
ನಿಜ. ಆದರೆ ಆಗ ಅಷ್ಟೇ ಸಾಕಾಗಿತ್ತು. ಒಬ್ಬನೇ ಶಕುನಿ ಇದ್ದನಲ್ಲ....

ಎಚ್.ಆರ್. ದೇಸಾಯಿ, ರಾಯಚೂರು
◆ ಕರೀ ಆನೆಗಳಿಗೆ ಮಾವುತ, ಅಂಕುಶ ಇರುತ್ತವೆ. ಬಿಳಿ ಆನೆಗಳಿಗೆ?
ಮತದಾರನೇ ಮಾವುತ, ವೋಟೇ ಅಂಕುಶ. ಆದರೆ ನಮ್ಮಲ್ಲಿ ಮಾವುತ ನಾಪತ್ತೆ/ಫುಲ್ ಟೈಟ್ ಆಗುವುದೇ ಜಾಸ್ತಿ.

ಕೆ.ಪಿ. ಸುಜ್ಞಾನಾಚಾರ್ಯ, ಕಲಿಕೆರೆ
◆ ಇಂದು ಹೆಣ್ಣು ಗಂಡಿನ ಆರೋಗ್ಯಕ್ಕೆ ಹಾನಿಕಾರಕ ಅಲ್ಲವೆ?
ಈ ಮಾತನ್ನು ದ್ರೌಪದಿಯನ್ನು ಕಂಡು ದುರ್ಯೋಧನ ಆಸೆ ಪಟ್ಟಾಗ ವಿದುರ ಹೇಳಿದನಂತೆ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
◆ ರಾಮರಾಜ್ಯದಂತಹ ಆಡಳಿತ ನಮ್ಮ ದೇಶದಲ್ಲಿ ಬರಬಹುದೆ?
ಹೇಳಲಾಗದು; ಸದ್ಯಕ್ಕೆ ಅಲ್ಲಲ್ಲಿ ಕಪಿಗಳು ಆಳುತ್ತಿವೆ. ಕಪಿಗಳಿದ್ದಲ್ಲಿ ರಾಮ ಬಂದರೂ ಬಂದಾನು.

## ಬಹುಮಾನಿತ ಪ್ರಶ್ನೆ

ಪಿ.ಎನ್. ಶ್ರೀವತ್ಸ, ಬೆಂಗಳೂರು
◆ ಸಾಮಾನ್ಯವಾಗಿ ಸಾಮೂಹಿಕ ಮದುವೆ ಆದವರಲ್ಲಿ ವಿಚ್ಛೇದನ ಕಡಿಮೆ ಇರಲು ಕಾರಣವೇನು?
ಸಾಮೂಹಿಕ ವಿಚ್ಛೇದನದ ಪ್ರೋಗ್ರಾಂನ ಡೇಟ್ ಅನೌನ್ಸ್ ಆಗಲೆಂದು ಕಾಯುತ್ತಿರುತ್ತಾರಂತೆ.

ದೀಪಾ ವಿ. ಮಹಾಲೆ, ಸಾಂಬ್ರಾಣಿ
◆ ದೇಶ ನೋಡಬೇಕು, ಕೋಶ ಓದಬೇಕು. ಯಾಕೆ?
ನೆಟ್‌ವರ್ಕ್ ಇಲ್ಲವಾದಾಗ ಗೂಗಲ್ ಮೇಲೆ ಡಿಪೆಂಡ್ ಆಗದೆ ಸ್ವಂತ ನಾಲೆಡ್ಜನ್ನೇ ಬಳಸಬೇಕಲ್ಲ.

ಎಂ.ಎ. ಕುಮಾರ್, ಬೆಂಗಳೂರು
◆ ಬುದ್ಧಿವಂತರ ತಲೆ ಬೋಳಾಗಿರಲು ಕಾರಣ?
ಅವರಿವರಿಂದ ಚೆನ್ನಾಗಿ ಬೋಳಿಸಿಕೊಂಡ ಮೇಲೇ ಬುದ್ಧಿ ಬಂದಿರುತ್ತಂತೆ.

ಬಿ. ಚಂದ್ರೇಗೌಡ, ಬೆಂಗಳೂರು
◆ ಆಷಾಢ ಮಾಸದಲ್ಲಿ ನವದಂಪತಿಗಳನ್ನು ದೂರ ಇರಿಸಿದರೆ ಪಾಪ ಬರುವುದಿಲ್ಲವೆ?



ದೂರ ಇರಿಸಿದರೆ 'ಪಾಪ' ಹೇಗೆ ಬರುತ್ತದೆ? ಛಿ! ನಿಮಗೆ ಚೂರೂ ಬಯಾಲಜೀನೇ ಗೊತ್ತಿಲ್ಲ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
◆ ರೌಡಿಸಂನಿಂದ ಜೀವನ ಪ್ರಾರಂಭಿಸಿ ರಾಜಕೀಯದಲ್ಲಿ ಅಂತ್ಯವಾಗುವುದರ ಬಗ್ಗೆ ನಿಮ್ಮ ಅನಿಸಿಕೆ?
ಕೋರ್ಸ್ ಇರುವುದೇ ಹಾಗೆ; ರೌಡಿಸಂ ಸ್ಕೂಲ್ ಲೆವೆಲ್ಲು; ರಾಜಕೀಯ ಡಿಗ್ರಿ; ಮಂತ್ರಿ ಪಿ.ಎಚ್‌ಡಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
◆ ಜಗತ್ತಿನಲ್ಲಿ ಅತಿ ಸುಲಭವಾಗಿ ಸಿಗುವ ವಸ್ತು ಯಾವುದು?
ಅಮ್ಮ.

■ ರಾಮ್